ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 76-81
©IIMRD, Mysuru
IIMRD JOURNALS
www.iimrd.com

# ಅಲೆಮಾರಿ ಕುರಿಗಾಹಿಗಳ ಸಾಮಾಜಿಕ ರಾಜಕೀಯ ಜೀವನ: ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಮಾನೆ ಸಂತೋಷ ಕೃಷ್ಣಪ್ಪಾ[1] ಮತ್ತು ಡಾ. ಶಾಮಲಾ ಭೀ. ದಾಸೋಗ[2]

**ಪೀಠಿಕೆ**

ಭಾರತೀಯ ಸಮಾಜದಲ್ಲಿ ಕುರಿಗಾಹಿಗಳ ಜೀವನವಿಧಾನವು ವಿಶಿಷ್ಟವಾಗಿದ್ದು, ಕುರಿಗಳ ಸಾಕಾಣಿಕೆಗೆ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗುವುದು ಇವರ ಕಾಯಕವಾಗಿದೆ. ಸಾಮಾನ್ಯವಾಗಿ ಇವರು ತಮ್ಮ ಜಾನುವಾರುಗಳೊಂದಿಗೆ ಹುಲ್ಲುಗಾವಲುಗಳನ್ನು ಹುಡುಕುತ್ತಾ ನಿರಂತರವಾಗಿ ಚಲಿಸುತ್ತಾರೆ. ದಿನವಿಡಿ ಕುರಿ ಮೇಯಿಸಿ ದಣಿದುಕೊಂಡು ಸೂಕ್ತವೆನಿಸಿದ ಕಡೆ ಕುರಿಗಳೊಡನೆ ತಂಗುತ್ತಾರೆ. ಇವರು ನೆಲೆಸುವ ಪ್ರದೇಶಗಳು ಅಪರಿಚಿತವಾದುದ್ದರಿಂದ ಇವರು ಅನೇಕ ಸಮಸ್ಯೆಗಳನ್ನು ಎದುರಿಸುವುದು ಅನಿವಾರ್ಯವಾಗುತ್ತದೆ.

ಭಾರತವು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ವಿಶಿಷ್ಟತೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಭಾರತದ ಶೇ 70ಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕ ಜನರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಹೈನುಗಾರಿಕೆ/ಕುರಿಸಾಕಾಣಿಕೆಯು ಪ್ರಮುಖ ವೃತ್ತಿಯಾಗಿದೆ. ಹಿಂದುಳಿದ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಸಂವಿಧಾನದಡಿ ಅನೇಕ ಸೌಲಭ್ಯಗಳನ್ನು ನೀಡಿದ್ದರೂ ಕೂಡ ಒಂದೆಡೆ ನಿಲ್ಲದ ಅಲೆಮಾರಿ/ವಲಸೆ ಜೀವನದಿಂದಾಗಿ ಸರ್ಕಾರದ ಸೌಲಭ್ಯಗಳು ದೊರಕದೆ ಸಮಸ್ಯೆಗಳ ನಡುವೆ ಬದುಕುವ ಅನಿವಾರ್ಯತೆ ಎದುರಾಗಿದೆ.

ಭಾರತೀಯ ಗ್ರಾಮೀಣ ಸಮುದಾಯಗಳ ಬದುಕು ಒಂದೇ ರೀತಿಯಾಗಿ ಕಂಡರೂ ಅಲೆಮಾರಿ ಕುರಿಗಾಹಿ ಸಮುದಾಯಕ್ಕೆ ತನ್ನದೇಯಾದ ಪ್ರತ್ಯೇಕ ವಿಶಿಷ್ಟ ಗುಣ ವಿಶೇಷಗಳುಂಟು. ಅವರ ಆಚಾರ, ವಿಚಾರ, ಜೀವನ ವಿಧಾನ, ಕೌಟುಂಬಿಕ ಶಿಷ್ಟಾಚಾರ, ಕಟ್ಟುಪಾಡು, ಭಾಷೆ ಮುಂತಾದವುಗಳು ಅವರ ಜೀವನ ವಿಧಾನದಲ್ಲಿ ಹುದುಗಿಕೊಂಡಿದೆ. ಈ ಹಿನ್ನೆಲೆಯಲ್ಲಿ ಅಲೆಮಾರಿ ಕುರಿಗಾಹಿಗಳು ಮುಂದೆ ಇಡಬೇಕಾದ ಹೆಜ್ಜೆಗಳಾವವು? ತಮ್ಮ ಉನ್ನತಿಗಾಗಿ ಅಡೆ ತಡೆ ಒಡ್ಡುವ ಸಮಾಜದಲ್ಲಿ ನ್ಯೂನ್ಯತೆಗಳೇನು? ಇನ್ನಿತರ ಸಮಾಜದೊಂದಿಗೆ ಸರಿ ಸಮಾನವಾಗಿ ಬಾಳಲು ಅನುಸರಿಸಬೇಕಾದ ಕ್ರಮಗಳೇನು? ಅವರ

*[1] ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ (ಸಮಾಜಶಾಸ್ತ್ರ), ಶ್ರೀ.ಬಿ.ಆರ್.ದರೂರು ಸಂಶೋಧನಾ ಕೇಂದ್ರ, (ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ)ಹಾರೂಗೇರಿ.*

*[2] ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಎಮ್,ಎಮ್.ಎಸ್. ಕಲಾ, ವಾಣಿಜ್ಯ, ವಿಜ್ಞಾನ ಹಾಗೂ ಗೃಹ ವಿಜ್ಞಾನ ಕಾಲೇಜು, ಬೆಳಗಾವಿ.*

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನಗಳೇನು ಮುಂತಾದವುಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಅಲೆಮಾರಿ ಕುರಿಗಾಹಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ಅಧ್ಯಯನ ಮಾಡುವುದು.
- ಅಲೆಮಾರಿ ಕುರಿಗಾಹಿಗಳ ರಾಜಕೀಯ ಸ್ಥಾನಮಾನ ತಿಳಿದುಕೊಳ್ಳವುದು.
- ಅಲೆಮಾರಿ ಕುರಿಗಾಹಿಗಳ ಅಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ರಾಯಬಾಗ ತಾಲೂಕಿನ ಅಲಖನೂರ, ಬ್ಯಾಕೂಡ, ಬಾವಚಿ, ಬಿರನಾಳ, ಬೂದಿಹಾಳ, ಕಂಕಣವಾಡಿ, ದೇವಾಪೂರಹಟ್ಟಿ, ದೇವನಕಟ್ಟಿ, ಹುಬ್ಬರವಾಡಿ, ನಂದಿಕುರಳಿ ಗ್ರಾಮಗಳಿಂದ ಒಟ್ಟು 50 ಸದಸ್ಯರನ್ನು (35 ಪುರಷರು 15 ಮಹಿಳೆಯರು) ಸರಳ ಯಾಧೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಿಕೊಂಡು ಸಂದರ್ಶನ ಅನುಸೂಚಿ ಮತ್ತು ಇತರ ಸಮಾಜಶಾಸ್ತ್ರೀಯ ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಧ್ಯಮಿಕ  ಮಾಹಿತಿಯನ್ನು ವಿವಿಧ ಗ್ರಂಥಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ಜಿಲ್ಲಾ ಗ್ಯಾಸೆಟಿಯರ್, ವಿಶ್ವಕೋಶ, ಅಂತರ್ಜಾಲ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ವರದಿ ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಸಂಶೋಧನೆಯ ಫಲಿತಾಂಶಗಳು ಮತ್ತು ಚರ್ಚೆಗಳು**

ಪ್ರಸ್ತುತ ಭಾಗದಲ್ಲಿ ಅದ್ಯಯನಕ್ಕೊಳಪಡಿಸಿರುವ ಕುರಿಗಾಹಿ ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ.

**ಕೋಷ್ಟಕ 1: ಲಿಂಗವಾರು ಸೂಚನಾದಾರರ ಪ್ರಮಾಣ**

| ವಿವರ | ಆವೃತ್ತಿ | ಶೇಕಡಾವಾರು |
|---|---|---|
| ಪುರುಷರು | 35 | 70 |
| ಮಹಿಳೆಯರು | 15 | 30 |
| ಒಟ್ಟು | 50 | 100 |

ಕೋಷ್ಟಕ 1ರಲ್ಲಿ  ಅಧ್ಯಯನಕ್ಕೊಳಪಡಿಸಿರುವವರ ಲಿಂಗವಾರು ಪ್ರಮಾಣವನ್ನು ತೋರಿಸಲಾಗಿದೆ. ಅಧ್ಯಯನಕ್ಕೊಳಪಡಿಸಿರುವವರಲ್ಲಿ ಶೇ.70ರಷ್ಟು ಪುರುಷರಿದ್ದು, ಶೇ.30 ರಷ್ಟು ಮಹಿಳೆಯರಿದ್ದಾರೆ. ಮೊದಲು ಇಡೀ ಕುಟುಂಬವೇ ಕುರಿಸಾಕಾಣಿಕೆಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಿತ್ತು. ಆದರೆ ಬದಲಾದ ಸಾಮಾಜಿಕ ಸಂದರ್ಭದಲ್ಲಿ ಪುರುಷರು ಕುರಿಸಾಕಾಣಿಕೆಗೆ ಹೆಚ್ಚಿನ

ಪ್ರಮಾಣದಲ್ಲಿ ಹೊರಡುತ್ತಾರೆ. ಮಹಿಳೆಯರು ಮನೆಯಲ್ಲಿದ್ದುಕೊಂಡು ಮಕ್ಕಳ ಮತ್ತು ಹಿರಿಯರ ಪೋಷಣೆಯಲ್ಲಿ ತೊಡಗಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಸಾಮಾಜಿಕ ಭದ್ರತೆಯಿಲ್ಲದ ಕುಟುಂಬಗಳು ಮಾತ್ರ ತಮ್ಮೊಂದಿಗೆ ಮಹಿಳೆಯರು ಮತ್ತು ಮಕ್ಕಳನ್ನು ಜೊತೆಯಾಗಿ ಕರೆದುಕೊಂಡು ಹೋಗುವುದನ್ನು ಕಾಣಬಹುದಾಗಿದೆ.

**ಸೂಚನದಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು**

ಅಧ್ಯಯನಕ್ಕೊಳಪಡಿಸಿರುವವರಲ್ಲಿ ಶೇ.80.6ರಷ್ಟು ಸೂಚನದಾರರು ಅನಕ್ಷರಸ್ಥರಾಗಿದ್ದಾರೆ. ಇವರು ಕುರಿಸಾಕಾಣಿಕೆ ಜೊತೆಗೆ ಹಾಡುಗಾರಿಕೆ, ನೃತ್ಯ, ಕಂಬಳಿ ನೇಯಿಗೆ ಕಾಯಕದಲ್ಲಿ ತೊಡಗಿದವರಾಗಿದ್ದಾರೆ. ಹಬ್ಬಗಳ ಆಚರಣೆಯು ಅವರ ಋಣಭಾರಕ್ಕೆ ಕಾರಣವಾಗಿದ್ದು, ಯುವಕರು ಮಧ್ಯಪಾನ, ಧೂಮಪಾನ ಮತ್ತು ಇತರೆ ದುಶ್ಚಟಗಳ ದಾಸರಾಗಿ ಅನಾರೋಗ್ಯಕ್ಕೊಳಗಾಗುತ್ತಿರುವುದನ್ನು ಕಾಣಬಹುದಾಗಿದೆ.  ಇವರು ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಮೇವಿನ ಕೊರತೆ, ಬಡತನ, ಅನಕ್ಷರತೆ ಮುಂತಾದವು ಪ್ರಮುಖ ಅಂಶಗಳಾಗಿವೆ.

**ಕೋಷ್ಟಕ 2: ಮೂಲ ಸ್ಥಳದಿಂದ ಸೂಚನಾದಾರರು ವಲಸೆ ಬರಲು ಕಾರಣಗಳ ವಿವಿರ**

| ವಲಸೆಗೆ ಕಾರಣಗಳು | ಆವೃತ್ತಿ | ಶೇಕಡಾವಾರು |
|---|---|---|
| ಪ್ರಕೃತಿ ವೈಪರಿತ್ಯ/ಮೇವಿನ ಕೊರತೆ | 28 | 56 |
| ಮೂಲ ವೃತ್ತಿಯ ಅನುಸರಣೆ | 10 | 20 |
| ಯಾವುದೇ ಉದ್ಯೋಗ ಸಿಗದಿರುವುದು | 12 | 24 |
| ಒಟ್ಟು | 50 | 100 |

ಕೋಷ್ಟಕ ಎರಡರಲ್ಲಿ  ಕುರಿಗಾಹಿಗಳು ಕುರಿಸಾಕಾಣಿಕೆಗಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಹೋಗಲು ಕಾರಣಗಳೇನು ಎಂಬುದನ್ನು ವಿವರಿಸಲಾಗಿದ್ದು, ಶೇ. 56 ರಷ್ಟು ಸೂಚನಾದಾರರು ಸ್ವಂತ ಸ್ಥಳದಲ್ಲಿ ಉಂಟಾಗುವ ಪಾಕೃತಿಕ ವೈಪರಿತ್ಯ ಮತ್ತು ಮೇವಿನ ಕೊರತೆಯಿಂದ, ಶೇ 20 ರಷ್ಟು ಮೂಲ ವೃತ್ತಿಯನ್ನೇ ಅವಲಂಬಿಸಿಕೊಂಡಿರುವುದ್ದರಿಂದ ಹಾಗೂ ಶೇ. 24 ರಷ್ಟು ಪರ್ಯಾಯ ಉದ್ಯೋಗ ದೊರೆಯದ ಕಾರಣ ವಲಸೆ/ಅಲೆಮಾರಿ ಜೀವನ ಅನಿವಾರ್ಯವಾಗಿರುವುದನ್ನು ಅಧ್ಯಯನದಲ್ಲಿ ಗುರುತಿಸಿಕೊಳ್ಳಲಾಗಿದೆ.

ಕೋಷ್ಟಕ 3 ರಲ್ಲಿ ಕುರಿಗಾಹಿಗಳ ರಾಜಕೀಯ ಅರಿವು ಮತ್ತು ರಾಜಕೀಯವಾಗಿ ಅವರ ಪಾಲ್ಗೊಳ್ಳುವಿಕೆಯ ವಿವರವನ್ನು ಹಾಗು ಅವರಿಗಿರುವ ರಾಜಕೀಯ ಜ್ಞಾನವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಶೇ 72 ರಷ್ಟು ಮಂದಿ ಕಳೆದ ಚುನಾವಣೆಯಲ್ಲಿ ಮತದಾನ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಹಾಗೂ ಶೇ.12 ರಷ್ಟು ಸೂಚನದಾರರ ಕುಟುಂಬದವರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿಯೂ, ಶೇ2ರಷ್ಟು ತಾಲೂಕು ಪಂಚಾಯಿತಿ ಚುನಾವಣೆಯಲ್ಲಿಯೂ ಸ್ಪರ್ಧಿಸಿರುವುದಾಗಿಯೂ ಹೇಳಿದ್ದಾರೆ.

**ಕೋಷ್ಟಕ 3: ರಾಜಕೀಯ ಪಾಲ್ಗೊಳ್ಳುವಿಕೆಯ ವಿವರ**

| ವಿವರಗಳು | ಆವೃತ್ತಿ (N=50) | ಶೇಕಡಾವಾರು |
|---|---|---|
| ಕಳೆದ ಮತದಾನ ಮಾಡಿರುವವರ ವಿವರ | 36 | 72 |
| ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ದಿಸಿರುವವರ ವಿವರ | 06 | 12 |
| ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿರುವವರ ವಿವರ | 01 | 02 |
| ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿರುವವರ ವಿವರ | 00 | 00 |
| ರಾಜಕೀಯ ಪಕ್ಷಗಳ ವಿವರ ಮತ್ತು ಚಿಹ್ನೆಯ ಬಗ್ಗೆ ಅರಿವಿರುವವರ ಪ್ರಮಾಣ | 12 | 24 |
| ಕಳೆದ ಚುನಾವಣೆಯಲ್ಲಿ ಸ್ವಂತ ನಿರ್ಧಾರದಿಂದ ಮತ ಚಲಾಯಿದಿರುವವರ ಪ್ರಮಾಣ | 14 | 28 |
| ಮತ ಚಲಾಯಿಸಲು ಹಣದ ಪಡೆದವರ ಪ್ರಮಾಣ | 18 | 36 |
| ಮತ ಚಲಾಯಿಸಲು ಮಧ್ಯಪಾನ ಪಡೆದವರ ಪ್ರಮಾಣ | 27 | 54 |
| ಜನಪ್ರತಿನಿಧಿಗಳು ನಿಮ್ಮ ಹಳ್ಳಿಗೆ ಬೇಟಿ ನೀಡುತ್ತಾರೆಯೇ? (ಹೌದು) | 07 | 14 |

ಆದರೆ ಜಿಲ್ಲಾ ಪಂಚಾಯತಿ ಅಥವಾ ವಿಧಾನ ಸಭೆ ಚುನಾವಣೆಯಲ್ಲಿ ಯಾರು ಕೂಡ ಸ್ಪರ್ಧಿಸದಿರುವುದು ಕಂಡು ಬರುತ್ತದೆ. ಅನಕ್ಷರಸ್ಥರ ಪ್ರಮಾಣವೇ ಅಧಿಕವಾಗಿರುವ ಇವರನ್ನು ರಾಜಕೀಯ ಪಕ್ಷಗಳು ಇವರನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಮತ ಚಲಾವಣೆಯ ಸಂದರ್ಭಧಲ್ಲಿ ಶೇ 14 ರಷ್ಟು ಮಂದಿ ಮಾತ್ರ ಸ್ವಂತ ನಿರ್ಧಾರದಿಂದ ಮತ ಚಲಾಯಿಸಿದ್ದು, ಶೇ. 80ಕ್ಕೂ ಅಧಿಕ ಮಂದಿ ಇತರರ ಸೂಚನೆಯ ಮೇರೆಗೆ ಅವರು ಹೇಳಿದವರಿಗೆ ಮತ ನೀಡಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಇನ್ನುಳಿದಂತೆ ಶೇ.36 ರಷ್ಟು ಮಂದಿಗೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಹಣ ನೀಡಿರುವುದು ಮತ್ತು ಶೇ. 54 ರಷ್ಟು ಮಂದಿಗೆ ಮಧ್ಯಪಾನ ನೀಡಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಇನ್ನುಳಿದಂತೆ ಗೆದ್ದಂತಹ ಜನಪ್ರತಿನಿಧಿಗಳು ಅವರ ಹಳ್ಳಿಗಳಿಗೆ ಬಂದು ಅವರ ಸಮಸ್ಯೆಗಳ ಪರಿಹಾರದಲ್ಲಿ ಸಹಕರಿಸಿರುವುದರ ಬಗ್ಗೆ ಶೇ. 14ರಷ್ಟು ಮಂದಿ ಮಾತ್ರ ತೃಪ್ತಕರವಾದ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಅಧ್ಯಯನದ ಮೂಲಕ ವ್ಯಕ್ತವಾದ ಅಂಶಗಳನ್ನು ಗಮನಿಸಿದಾಗ ಅಲೆಮಾರಿ ಕುರಿಗಾಹಿಗಳು ರಾಜಕೀಯದಲ್ಲಿ ಬೆರಳೆಣಿಕೆಯಷ್ಟು ಮಾತ್ರ ತಮ್ಮ ಪ್ರತಿನಿಧಿತ್ವವನ್ನು ಹೊಂದಿದ್ದಾರೆ. ವಿಶೇಷವಾಗಿ ಅಲೆಮಾರಿ ಕುರಿಗಾಹಿಗಳು ಶೇ. 70 ರಷ್ಟು ಮಾತ್ರ ಚುನಾವಣೆಯಲ್ಲಿ ಮತದಾನದ ಮೂಲಕದಷ್ಟೇ ರಾಜಕೀಯದಲ್ಲಿ ಭಾಗವಹಿಸುತ್ತಿದ್ದಾರೆ.

ಅಲೆಮಾರಿ ಕುರಿಗಾಹಿಗಳು ಕೇವಲ ಮೀಸಲಾತಿಯ ಸಲುವಾಗಿ ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುತ್ತಿದ್ದಾರೆ ವಿನಃ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಭಾಗವಹಿಸುವಿಕೆಯ ಪ್ರಮಾಣ ಅತ್ಯಂತ ಕಡಿಮೆ ಇದೆ. ಪ್ರಸ್ತುತ ಕಾಲಘಟ್ಟಗಳಲ್ಲಿ ಒಂದು ಸಮುದಾಯ ಸಾಮಾಜಿಕ ಸ್ಥರವ್ಯವಸ್ಥೆಯಲ್ಲಿ ಕೆಳಹಂತದಿಂದ ಮೇಲಿನ ಹಂತಕ್ಕೆ ಪರಿವರ್ತನೆಯಾಗಬೇಕೆಂದು ಹಲವಾರು ಸವಲತ್ತುಗಳನ್ನು ಕಲ್ಪಿಸಿ ಕೊಡಲಾಗಿದೆ. ಆದರೂ ಕೂಡ ಇವರು ಇಂದಿಗೂ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದಿರುವುದನ್ನು ಕಾಣಬಹುದಾಗಿದೆ.

**ಅಲೆಮಾರಿ ಕುರಿಗಾಹಿಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿಂದುಳಿಕೆಗೆ ಕಾರಣಗಳು**

ಪ್ರಸ್ತುತ ಸಂಶೋಧನೆಯ ಆಧಾರದ ಮೇಲೆ ಕುರಿಗಾಹಿ ಸಮುದಾಯಗಳ ಸಾಮಾಜಿಕ ಮತ್ತು ರಾಜಕೀಯ ಹಿಂದುಳಿದಿರುವಿಕೆಗೆ ಹಲವಾರು ಕಾರಣಗಳನ್ನು ಗುರುತಿಸಲಾಗಿದೆ ಅವುಗಳೆಂದರೆ

- ಸಾಮಾಜಿಕ ಮತ್ತು ರಾಜಕೀಯದ ಮೀಸಲಾತಿ ಮತ್ತು ಯೋಜನೆಗಳ ಬಗೆಗಿನ ಅರಿವಿನ ಕೊರತೆ.
- ರಾಜಕೀಯ ಆಸಕ್ತಿಯ ಕೊರತೆ.
- ಅಲೆಮಾರಿ ಕುರಿಗಾಹಿಗಳ ಆರ್ಥಿಕ ಅಶಕ್ತತೆ ಮತ್ತು ಅನಕ್ಷರತೆ.
- ಅಲೆಮಾರಿ ಕುರಿಗಾಹಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದು ಪ್ರಮುಖ ಕಾರಣವಾಗಿದೆ.

**ಕುರಿಗಾಹಿಗಳ ಅಭಿವೃದ್ಧಿಗೆ ಸಲಹೆಗಳು:**

ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡಂತಹ ಫಲಿತಾಂಶಗಳ ಆಧಾರ ಮೇಲೆ ಅಲೆಮಾರಿ ಕುರಿಗಾಹಿಗಳ ಅಭಿವೃದ್ಧಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ.

- ಅಲೆಮಾರಿ ಕುರಿಗಾಹಿಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು.
- ಅಲೆಮಾರಿ ಕುರಿಗಾಹಿಗಳಲ್ಲಿ ಅನಕ್ಷರತೆ ಪ್ರಮಾಣ ಹೆಚ್ಚಿರುವುದ್ದರಿಂದ ಅವರ ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆಯನ್ನು ನೀಡುವುದು.
- ವೈಜ್ಞಾನಿಕ ಮಾರುಕಟ್ಟೆಗಳ ಸ್ಥಾಪನೆ ಮೂಲಕ ಅವರ ಜಾನುವಾರುಗಳನ್ನು ಮಾರಲು ವ್ಯವಸ್ಥೆ ಕಲ್ಪಿಸುವುದು.
- ಕುರಿಗಾಹಿ ಸಮುದಾಯಗಳಿಗೆ ರಾಜಕೀಯ ಮಹತ್ವವನ್ನು ತಿಳಿಸುವುದು.
- ಕುರಿಗಾಹಿಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಸಾಮಾಜಿಕ ಸುರಕ್ಷೆ ಕಾರ್ಯಕ್ರಮ, ಕುರಿ ಮತ್ತು ಉಣ್ಣೆ ಉನ್ನತ್ತಿ ಕಾರ್ಯಕ್ರಮ, ಕುರಿ ತಳಿ ವಿಮಾ ಯೋಜನೆ, ಕುರಿ ಭೀಮಾ ಕಾರ್ಯಕ್ರಮ, ಪಾಶ್ಚಿಮಾತ್ಯ ಉಣ್ಣೆ ಅಭಿವೃದ್ದಿ ಯೋಜನೆ, ಸಾಮನ್ಯ ಸೌಲಭ್ಯ ಕೇಂದ್ರ ಮುಂತಾದ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವುದು ಸಧ್ಯದ ತುರ್ತಾಗಿದೆ.

**ಪರಾಮರ್ಶನ ಗ್ರಂಥಗಳು**


- ಕೋಥ ಎಸ್.ಎನ್ (1957). ಶಿಫ್ ಆಂಡ್ ವೂಲ್ ಇನ್ ಇಂಡಿಯಾ. ದಿ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್, ನ್ಯೂ ದೆಹಲಿ.
- ಮನೋಜ ಪಾಟೀಲ (1987) ಬೆಳಗಾವಿ ಜಿಲ್ಲಾ ಮಾರ್ಗದರ್ಶಿ, ಪವನ ಪ್ರಕಾಶನ, ಬೆಳಗಾವಿ
- ಮೇತ್ರಿ ಎಂ.ಕೆ. (2002). ಬುಡಕಟ್ಟು ಕುಲ ಕಸಬುಗಳು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.